ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನವನ್ನು ಭೋಧಿಸಲಾದ ದಿನಾಂಕಃ 24.07.2026

ಮುಂದುವರೆದ ಪಾಟೀ ಸವಾಲು ಃವಾದಿಗಳ ಪರ ಶ್ರೀಮತಿ ಎಲ್.ವಿ ವಕೀಲರಿಂದ

1. ನಾನು ಹಾಜರುಪಡಿಸಿರುವ ನಿಡಿ 13 ರ ದಾಖಲೆಯು ನನ್ನ ಬಳಿಯೆ ಇತ್ತು. ನಿ ಡಿ 13 ರ ಬಗ್ಗೆ ನನ್ನ ಪ್ರತಿವಾದ ಪತ್ರದಲ್ಲಿ ತಿಳಿಸಿರುತ್ತೇನೆ. ನಮ್ಮ ಕುಟುಂಬದ ಎಲ್ಲಾ ಪುರುಷ ಮತ್ತು ಮಹಿಳಾ ಸದಸ್ಯರು ಸೇರಿ ನಿಡಿ 13 ನ್ನು ಬರೆದಿರುತ್ತೇವೆ. ಸದರಿ ಪತ್ರಕ್ಕೆ ಕುಟುಂಬದ ಎಲ್ಲಾ ಸದಸ್ಯರು ಸಹಿ ಮಾಡಿರುವುದಿಲ್ಲ, ಕೇವಲ ಪುರುಷ ಸದಸ್ಯರು ಮಾತ್ರ ಸಹಿ ಮಾಡಿರುತ್ತಾರೆ. ಪತ್ರ ಬರೆಯುವ ಸಮಯದಲ್ಲಿ ಮೂರು ಜನ ನನ್ನ ಸಹೋದರಿಯರಿಗೆ ವಿವಾಹ ಆಗಿತ್ತು ಇಬ್ಬರು ಸಹೋದರಿಯರಿಗೆ ಆಗಿರಲಿಲ್ಲ. ನನ್ನ ಸಹೋದರಿಯರ ವಿವಾಹ ಆದ ವರ್ಷ ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ಅವಿವಹಾಹಿತರಾಗಿದ್ದ ನನ್ನ ಸಹೋದರಿಯರಿಗೆ ವಿಭಾಗ ನೀಡಿರುವುದಿಲ್ಲ. ನನ್ನ ಸಹೋದರಿಯರ ಸಹಿ ಪಡೆಯಲು ನನಗೆ ತೊಂದರೆ ಇರಲಿಲ್ಲ. ಪಂಚಾಯ್ತಿ ಪಾಲುಪಟ್ಟಿಯ ದಿನಾಂಕ 20.11.2000 ದ ಪ್ರಕಾರ ನನ್ನ ಹೆಸರಿಗೆ ನನ್ನ ತಂದೆಯು ಮೂರು ಆಸ್ತಿಗಳನ್ನು ಖಾತೆ ಮಾಡಿಸಿಕೊಟ್ಟಿರುತ್ತಾರೆ ಎಂದು ನನ್ನ ಪ್ರತಿವಾದ ಪತ್ರದಲ್ಲಿ ತಿಳಿಸಿರುತ್ತೇನೆ ಎಂದರೆ ಸರಿ. ನಾನು ಹಾಜರುಮಾಡಿರುವ ನಿಡಿ 13 ಕರಡು ಪತ್ರ ಎಂದರೆ ಸರಿ. ನನ್ನ ತಂದೆಯು ದಿನಾಂಕ 01.10.2025 ರಂದು ಮೃತಪಟ್ಟಿರುತ್ತಾರೆ ಎಂದರೆ ಸರಿ. ಅವರು ಸಹ ಪ್ರಸ್ತುತ ದಾವೆಯ 1 ನೇ ವಾದಿ ಎಂದರೆ ಸರಿ. ಸಾಕ್ಷಿದಾರರ ತಂದೆಯ ಹೆಸರು ಮತ್ತು ವಿಳಾಸವನ್ನು ನಿಡಿ 13 ರಲ್ಲಿ ಬರೆದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಅದನ್ನು ನನ್ನ ತಂದೆ ಮಾಡಿಸಿದ ಕಾರಣ ನನಗೆ ಗೊತ್ತಿಲ್ಲ

ಎಂದು ನುಡಿಯುತ್ತಾರೆ. ಅದರಲ್ಲಿ ಯಾವುದೇ ವ್ಯಕ್ತಿಯನ್ನು ಬೇರೊಬ್ಬ ವ್ಯಕ್ತಿಯನ್ನು ಗುರುತಿಸಿಲ್ಲ ಎಂದರೆ ಸರಿಯಲ್ಲ. ನಿಡಿ 13 ನ್ನು ನನ್ನ ತಂದೆ ಬರೆಸಿದ್ದು ಅದರ ಬಗ್ಗೆ ನನಗೆ ಖುದ್ದು ಮಾಹಿತಿ ಇಲ್ಲ.

2. ದಾವಾ ಆಸ್ತಿಗಳಿಗೆ ಸಂಬಂಧಪಟ್ಟಂತೆ ನನ್ನ ತಂದೆಯು ಯಾವುದೇ ದಾಖಲೆಗಳನ್ನು ಬರೆಸಿಲ್ಲ ಎಂದರೆ ಸರಿಯಲ್ಲ. ದಾವೆಯನ್ನು ವಿಳಂಬ ಮಾಡಲು ಮತ್ತು ವಾದಿಗಳ ಹಿಸ್ಸಾ ಭಾಗವನ್ನು ತಪ್ಪಿಸಲು ನಾನು ನ್ಯಾಯಾಲಯದಲ್ಲಿ ಉದ್ದೇಶ ಪೂರಕವಾಗಿ ಒಂದೊಂದೇ ದಾಖಲೆಗಳನ್ನು ಹಾಜರುಪಡಿಸುತ್ತಿದ್ದೇನೆ ಎಂದರೆ ಸರಿಯಲ್ಲ. ನಾನೇ ದಾಖಲಾತಿಗಳನ್ನು ಸೃಷ್ಠಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಿಡಿ 13 ರ ದಾಖಲೆಯನ್ನು ನೋಂದಣಿ ಮಾಡಿಸಲು ತೊಂದರೆ ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ವಾದಿ 5 ರಿಂದ 7 ರ ವಿವಾಹವನ್ನು ನನ್ನ ತಂದೆ ಮಾಡಿರುತ್ತಾರೆ ಎಂದರೆ ಸಾಕ್ಷಿಯು ನಾವೆಲ್ಲಾ ಸೇರಿ ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ನಿಡಿ 13 ರ ರೀತ್ಯಾ ದಾವಾ ಆಸ್ತಿಗಳ ಖಾತೆ ಆಗಿರುವುದಿಲ್ಲ. ಕುಟುಂಬದಲ್ಲಿ ನಾನೇ ಬುದ್ಧಿವಂತನಾದ ಕಾರಣ ದಾಖಲೆಗಳನ್ನು ಸೃಷ್ಠಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಿಡಿ 13 ರ ದಾಖಲೆಯನ್ನು ಇತ್ತೀಚೆಗೆ ಸೃಷ್ಠಿ ಮಾಡಿಕೊಂಡು ಹೆಣ್ಣು ಮಕ್ಕಳಿಗೆ ಹಿಸ್ಸೆ ಕೊಡಬೇಕಾಗುತ್ತದೆ ಎಂದು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ.

(ದೇವರಾಜು ಹೆಚ್.ಆರ್.)
C/C 1ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ಕೆ.ಆರ್.ಪೇಟೆ.